→ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಕೈತೊಳೆಯಲು ಉಪಯೋಗಿಸಿದ ಒಂದು ಲಿಕ್ವಿಡ್ ಸಾಬೂನಿನ ಬೆಲೆ ರೂ.187. ಇದರ ಟೆಂಡರನ್ನು ಒಂದು ವಿದೇಶಿ ಕಂಪನಿಗೆ ನೀಡಲಾಗಿತ್ತು.

→ ಕಾಮನ್ ವೆಲ್ತ್ ಕ್ರೀಡಾಕೂಟಕ್ಕಾಗಿ ನಿರ್ಮಿಸಿದ ತಾತ್ಕಾಲಿಕ ಕಛೇರಿಯ ಒಳಾಂಗಣ ಅಲಂಕಾರಕ್ಕೆ ಮಾಡಿದ ಖರ್ಚು ಸುಮಾರು 687.5 ಕೋಟಿಗಳಷ್ಟು ಬೃಹತ್ ಪ್ರಮಾಣದ ಹಣವಾಗಿದೆ. ಈ ಕುರಿತು ಆರ್ಥಿಕ ತಜ್ಞರು ಯೋಜಕರು ಗಂಭೀರವಾಗಿ ಯೋಚಿಸಬೇಕಾಗಿದೆ.

→ ಕಾಮನ್‌ವೆಲ್ತ್ ಕ್ರೀಡಾಕೂಟದ ಪಾರ್ಕಿಂಗ್ ಸ್ಥಳಕ್ಕಾಗಿ ದಿನಾಂಕ 15 ಎಪ್ರಿಲ್ 2010 ರಂದು ಸುಮಾರು 368 ದಲಿತ ತಮಿಳು ಕುಟುಂಬಗಳು ವಾಸಿಸುತ್ತಿದ್ದ ಗುಡಿಸಲುಗಳನ್ನು – ಜೋಪಡಿಗಳನ್ನು, ಯಾವುದೇ ಪರಿಹಾರ ನೀಡದೆ, ಅಮಾನುಷವಾಗಿ ಬುಲ್ಡೋಜರ್ ಮೂಲಕ ನೆಲಸಮಗೊಳಿಸಲಾಗಿತ್ತು. ಒಟ್ಟು ಕಾಮನ್ ವೆಲ್ತ್ ಗೇಮ್ಸ್ ವ್ಯವಸ್ಥೆಗಾಗಿ 40,000 ಹೆಚ್ಚು ಮನೆಗಳನ್ನು ಖಾಲಿ ಮಾಡಿಸಿರುವುದು ಅತ್ಯಂತ ಖಂಡನೀಯವಾಗಿದೆ.

→ ಕೇಂದ್ರ ಸರ್ಕಾರ ನೀಡಿದ ಹಣವನ್ನು ಹೊರತುಪಡಿಸಿ, ದೆಹಲಿಯ ರಾಜ್ಯಸರ್ಕಾರ 10,000 ಕೋಟಿಗೂ ಅಧಿಕ ಹಣ ಕಾಮನ್‌ವೆಲ್ತ್ ಕ್ರೀಡಾಕೂಟಕ್ಕಾಗಿ ವ್ಯಯಮಾಡಿದೆ. ಇಂತಹ ಅನುಪಯುಕ್ತ ವೆಚ್ಚ ಮಾಡಿದ ನಂತರವೂ ಕ್ರೀಡಾಕೂಟವು ಅವ್ಯವಸ್ಥೆಗಳ ಆಗರವಾಗಿತ್ತು. ಈಗ ದೆಹಲಿಯ ಅತ್ಯಂತ ಉಪಯುಕ್ತ ಮೆಟ್ರೋರೈಲಿನ ಮೂರನೇ ಹಂತದ ಕಾಮಗಾರಿ ನಡೆಸಲು ದೆಹಲಿಯ ಕಾಂಗ್ರೆಸ್ ಸರ್ಕಾರ ನಮ್ಮ ಬಳಿ ಹಣವೇ ಇಲ್ಲವೆಂದು ಹೇಳುತ್ತಿದೆ.

→ 80% ಭಾರತ ಬಡ ರಾಷ್ಟ್ರವಾಗಿದೆ. 1997 ನಿಂದ ಕೃಷಿ ಪ್ರಧಾನ ಭಾರತದಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಸಂಖ್ಯೆ 1,99,132. 35% ಗಿಂತಲೂ ಹೆಚ್ಚು ಬಡತನ ರೇಖೆಗಿಂತ ಕೆಳಗಿರುವ ಪ್ರಜೆಗಳನ್ನು ಹೊಂದಿರುವ ಭಾರತದಂತಹ ಒಂದು ರಾಷ್ಟ್ರದಲ್ಲಿ ಇಷ್ಟೊಂದು ಖರ್ಚು ಅಗತ್ಯವಿದೆಯೆ ಎಂಬುದನ್ನು ಗಂಭೀರವಾಗಿ ಯೋಚಿಸಬೇಕಾಗಿದೆ...

→ ಸಮಾಜದ ಅತ್ಯಂತ ದುರ್ಬಲ ವರ್ಗವಾದ ಪರಿಶಿಷ್ಟ ಜಾತಿಯ ಅಭಿವೃದ್ಧಿಗಾಗಿ ಮೀಸಲಿರಿಸಿದ ಹಣವನ್ನು ಕಾಮನ್‌ವೆಲ್ತ್ ಗೇಮ್ಸಗೆ ಬಳಸಿಕೊಂಡು ಕೇಂದ್ರ ಸರಕಾರ ಅತ್ಯಂತ ಹೀನ ಅಪರಾಧವನ್ನು ಮಾಡಿದೆ.

→ ಕೇವಲ ಒಬ್ಬ ಸುರೇಶ್ ಕಲ್ಮಾಡಿಯ ಬರೇ ರಾಜಿನಾಮೆಯಿಂದ ದೇಶದ ನಷ್ಟ ಪುನ: ತುಂಬಿಕೊಳ್ಳುವುದಿಲ್ಲ. ವಿಶ್ವದಲ್ಲಿಯೇ ಕುಖ್ಯಾತಿ ಪಡೆದಿರುವ ಇಷ್ಟೊಂದು ದೊಡ್ಡ ಹಗರಣಕ್ಕೆ ಕೇವಲ ಒಬ್ಬ ವ್ಯಕ್ತಿಯಷ್ಟೇ ಕಾರಣವಂದರೆ ನಂಬಲಾಗದು. ಆದ್ದರಿಂದ ಈ ಹಗರಣದ ಹಿಂದೆ ಇರುವ ತಲೆ ಮತ್ತು "ಮೆಹಾನ್ ಜೇ" ಗಳು ಯಾರೆಂದು ದೇಶಕ್ಕೆ ಗೊತ್ತಾಗಬೇಕು. ಇಂತವರನ್ನು ದೇಶ ಕ್ಷಮಿಸಲಾರದು. ಶಿಕ್ಷೆಯಾಗಲೇಬೇಕು.

2020ರಲ್ಲಿ ಸೂಪರ್ ಪವರ್ ಕನಸನ್ನು ಕಾಣುತ್ತಿರುವ ನಮ್ಮ ದೇಶ ಎತ್ತ ಸಾಗುತ್ತಿದೆ? ಭ್ರಷ್ಟಾಚಾರವನ್ನೆ ಶಿಷ್ಟಾಚಾರ ಮಾಡಲು ಹೊರಟಿರುವುದು ಯಾವ ನ್ಯಾಯ?

ಈ ಅಮಾನವೀಯ ಭ್ರಷ್ಟಾಚಾರವನ್ನು ನೋಡಿ ಭಾರತದ ನಾಗರೀಕರು ತಲೆತಗ್ಗಿಸಬೇಕಾದ ನಾಚಿಕೆಗೇಡಿನ ಪರಿಸ್ಥಿತಿ ನಿರ್ಮಾಣವಾಗಿದೆ, ಇದಕ್ಕೆ ಕಾರಣರಾರು? ಭ್ರಷ್ಟಾಚಾರದಿಂದ ಅಭಿವೃದ್ಧಿ ಕಾಲುಮೂರಿದು ಕುಳಿತಿದೆ. ಇಂದು ಭ್ರಷ್ಟಾಚಾರದಿಂದ ಸಾಮಾಜಿಕ ಪ್ರಗತಿಗೆ ಕಂಟಕವಾಗಿದೆ. ಸಾರ್ವಜನಿಕ ಆಡಳಿತದಲ್ಲಿ ಪಾರದರ್ಶಕತೆ, ಪ್ರಾಮಾಣಿಕತೆ ಮತ್ತು ಸಮಾನ ಅವಕಾಶಗಳು ಮಗುತ್ತಿವೆ ಎಂಬ ನಂಬಿಕೆ ಸುಳ್ಳಾಗುತ್ತಿವೆ. ಒಳ್ಳೆಯ ಆಡಳಿತಕ್ಕೆ ಕೊಡಲಿ ಪೆಟ್ಟು ಬೀಳುತ್ತಿದೆ. ಕಾನೂನಿನ ನಿಯಮಗಳು ಸಮಾಜದಲ್ಲಿ ಮೌಲ್ಯವನ್ನು ಕಳೆದುಕೊಳ್ಳುತ್ತಿವೆ. ರಾಷ್ಟ್ರೀಯ ಮತ್ತು ವಿದೇಶಿ ಬಂಡವಾಳ ಹೂಡಿಕೆಯಲ್ಲಿ ನಿರುತ್ಸಾಹ ಕಂಡು ಬರುತ್ತಿದೆ. ಕಾಳಸಂತೆಯ ಆರ್ಥಿಕತೆಗೆ (ಬ್ಲಾಕ್ ಮಾರ್ಕೆಟ್) ಅವಕಾಶ ಮಾಡಿಕೊಡುತ್ತಿದೆ. ಒಂದು ಹೊಸ ಅಸುರಕ್ಷತೆಯನ್ನು ದೇಶದಲ್ಲಿ ಸೃಷ್ಟಿ ಮಾಡುತ್ತಿದೆ. ಒಟ್ಟಿನಲ್ಲಿ ಮೌಲ್ಯಗಳ ಅಧಃಪತನದಿಂದ ಭ್ರಷ್ಟಾಚಾರವು ಒಂದು ಬಲಿಷ್ಠ ದೇಶ ನಿರ್ಮಿಸಲು ಎದುರಾಗಿರುವ ಒಂದು ದೊಡ್ಡ ಅಡ್ಡಗೋಡೆಯಾಗಿದೆ. ಮಾತ್ರವಲ್ಲ ರಾಷ್ಟ್ರೀಯ ಸುರಕ್ಷತೆಗೆ ತೀವ್ರತರವಾದ ಧಕ್ಕೆಯನ್ನುಂಟು ಮಾಡಿದೆ.

ಆತ್ಮೀಯರೇ. ಇಂದು ಭ್ರಷ್ಟಾಚಾರವೆಂಬ ಸಾಮಾಜಿಕ ಪಿಡುಗಿನ ವಿರುದ್ಧ, ಮೌಲ್ಯಗಳ ಅಧಃಪತನದ ವಿರುದ್ಧ, ಅನೈತಿಕತೆ, ಅಪ್ರಾಮಾಣಿಕತೆಯ ವಿರುದ್ಧ, ದೇಶದಾದ್ಯಂತ ಕಾಲೇಜು ಕ್ಯಾಂಪಸ್‌ಗಳು, ವಿಶ್ವವಿದ್ಯಾಲಯದ ಕ್ಯಾಂಪಸ್‌ಗಳು ಸೇರಿದಂತೆ ದೇಶದ ಪ್ರತಿಯೊಬ್ಬ ನಾಗರೀಕನು, ಎದೆಎತ್ತಿ, ತೊಡೆತಟ್ಟಿ ಭ್ರಷ್ಟಾಚಾರದ ವಿರುದ್ಧ ಸೈನಿಕರಂತೆ ಎದ್ದು ನಿಲ್ಲಬೇಕಾದ ಸಮಯ ಬಂದಿದೆ. ಬನ್ನಿ, ಬರೀ ಚಿಂತಿಸಿ, ಚರ್ಚಿಸಿ ಮನೆಗಳಲ್ಲಿ ಹರಟೆ ಹೊಡೆಯುವುದರಿಂದ ಏನು ಪ್ರಯೋಜನವಿಲ್ಲ.

ಮನೆಯಿಂದ ಅಂಗಳಕ್ಕೆ, ಅಂಗಳದಿಂದ ರಣರಂಗಕ್ಕೆ ಇಳಿದು ಭ್ರಷ್ಟಾಚಾರದ ವಿರುದ್ಧ ಯುದ್ಧ ಸಾರೋಣ.
ಭ್ರಷ್ಟಾಚಾರದಂತಹ ಸಾಮೂಹಿಕ ದುಷ್ಟತನದ ವಿರುದ್ಧ ಒಟ್ಟಾಗಿ ಪ್ರತಿಭಟಿಸೋಣ.
ಭ್ರಷ್ಟಾಚಾರದ ವಿರುದ್ಧದ ಯುದ್ಧದಲ್ಲಿ ಯುವಕರೇ ಸೇನಾನಿಗಳು.

ಭಾರತ್ ಮಾತಾಕಿ – ಜೈ

ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್

ABVP

#55, ಯುವ ಶಕ್ತಿ, ಎಬಿವಿಪಿ ಕಾರ್ಯಾಲಯ, ಮೊದಲನೇ ಮುಖ್ಯ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು –20
ದೂರವಾಣಿ/ ಫ್ಯಾಕ್ಸ್ : 080–23366456, ಇ–ಮೇಲ್:abvpkarnataka@yahoo.com

ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್, ಕರ್ನಾಟಕ

ಭ್ರಷ್ಟಾಚಾರದ ವಿರುದ್ಧ ರಾಜ್ಯವ್ಯಾಪಿ ಪ್ರತಿಭಟನೆ

ಭ್ರಷ್ಟಾಚಾರದಿಂದ ಸಹಸ್ರ ಸಹಸ್ರ ಕೋಟಿಗಳ ಲೂಟಿ

"ಗಾಂಧೀಜಿ, ಸುಭಾಶ್ ಚಂದ್ರ ಭೋಸ್, ಭಗತ್ ಸಿಂಗ್, ತಿಲಕ್, ಸರ್. ಎಮ್. ವಿಶ್ವೇಶ್ವರಯ್ಯ, ಅಂಬೇಡ್ಕರ್, ಲಾಲ್ ಬಹದ್ದೂರ್ ಶಾಸ್ತ್ರಿಯವರ ತ್ಯಾಗ ಆದರ್ಶಗಳೆ ನಮಗೆ ದಾರಿದೀಪ. ಸ್ವಾತಂತ್ರ್ಯ ಆಂದೋಲನದ ಬಲಿದಾನಿಗಳು ನಮಗೆ ಸ್ವಾತಂತ್ರ್ಯ ತಂದುಕೊಟ್ಟಿರುವುದು ಇಂದಿನ ನಾಯಕರುಗಳಿಗೆ ದೇಶದ ಸಂಪತ್ತನ್ನು ಕೊಳ್ಳೆ ಹೊಡೆಯಲು ಅಲ್ಲ"

ಸ್ವಿಸ್ ಬ್ಯಾಂಕಿನಲ್ಲಿರುವ ಭಾರತದ ಕಪ್ಪು ಹಣ ಸುಮಾರು 1456 ಬಿಲಿಯನ್ ಡಾಲರ್.....!!!
ಅಂದರೇ 65 ಲಕ್ಷದ 52 ಸಾವಿರ ಕೋಟಿ.....!!!!!!!!!





ಬನ್ನಿ, ಭ್ರಷ್ಟಾಚಾರದ ವಿರುದ್ಧ ಸೈನಿಕರಂತೆ ಎದ್ದು ನಿಲ್ಲಿ, ಪ್ರತಿಭಟಿಸಿ

ಆತ್ಮೀಯರೇ, ಏಷಿ ದೇಶವನ್ನು ಭ್ರಷ್ಟಾಚಾರದಿಂದ ಬಚಾವು ಮಾಡಲು ಎ.ಬಿ.ವಿ.ಪಿ ಜೊತೆಗೆ ಕೈಜೋಡಿಸಿ

ಕಾಂಗ್ರೆಸ್ ನೇತೃತ್ವದ ಯು.ಪಿ.ಎ ಸರ್ಕಾರದ ಭ್ರಷ್ಟಾಚಾರದ ವಿರುದ್ಧ ಅಭಾವಿಪ ರಾಷ್ಟ್ರವ್ಯಾಪಿ ಪ್ರತಿಭಟನೆ

ವಿಶ್ವದ ಅತಿದೊಡ್ಡ ವಿದ್ಯಾರ್ಥಿ ಸಂಘಟನೆಯಾದ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್‌ನ ಇತ್ತೀಚೆಗೆ ಡಿಸೆಂಬರ್ 2010 ಬೆಂಗಳೂರಿನಲ್ಲಿ ನಡೆದ 56ನೇ ರಾಷ್ಟ್ರೀಯ ಅಧಿವೇಶನದಲ್ಲಿ ಕಾಂಗ್ರೆಸ್ ನೇತೃತ್ವದ ಯು.ಪಿ.ಎ ಸರ್ಕಾರದ ಭ್ರಷ್ಟಾಚಾರದ ವಿರುದ್ಧ ದೇಶವ್ಯಾಪಿ ಆಂದೋಲನ ನಡೆಸಲು ನಿರ್ಧರಿಸಲಾಯಿತು. ಸ್ವಾತಂತ್ರ್ಯ ಪೂರ್ವದಲ್ಲಿ ವಿದೇಶಿಯರು ಸಾವಿರಾರು ಕೋಟಿಗಳಲ್ಲಿ ನಮ್ಮ ದೇಶದ ಹಣವನ್ನು ಲೂಟಿಮಾಡಿದ್ದರೆ ಇಂದು ನಮ್ಮ ರಾಜಕಾರಣಿಗಳು ಮತ್ತು ಅಧಿಕಾರಿಗಳು ತಾವಿರುವ ಅತ್ಯುಚ್ಚ ಸ್ಥಾನಗಳಿಂದ ಸಾವಿರಾರು ಕೋಟಿಗಳಿಂದ ಹಿಡಿದು ಲಕ್ಷಾಂತರ ಕೋಟಿಗಳವರೆಗೆ ಹಗಲು ದರೋಡೆ ಮಾಡುತ್ತಿದ್ದಾರೆ. ವಿದೇಶಿಯರಿಗೂ ಹಾಗೂ ನಮ್ಮ ದೇಶದವರಿಗೂ ಇರುವ ವ್ಯತ್ಯಾಸವೇನು? ಎಂಬುದನ್ನು ಭಾರತೀಯರೆಲ್ಲರು ಇಂದು ಯೋಚಿಸಲೇಬೇಕಾದ ವಿಷಯವಾಗಿದೆ. ಇಂದು ದೇಶದಾದ್ಯಂತ ಭ್ರಷ್ಟಾಚಾರವೆನ್ನುವುದು ಮನೆ ಮಾತಾಗಿ ಹೋಗಿದೆ. ನಗರಸಭೆಯಿಂದ ಪಾರ್ಲಿಮೆಂಟ್‌ವರೆಗೂ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಇದಕ್ಕೆ ಕಾರಣರಾರು.....? ಸಾಮಾನ್ಯ ಜನರು ಪಾವತಿಸಿದ ತೆರಿಗೆಯಿಂದ ಕಾಂಗ್ರೆಸ್ ಸರಕಾರ ಕೇವಲ 1992 ರಿಂದ ಈಚೆಗೆನ್ನೆ 18–20 ವರ್ಷಗಳಲ್ಲಿ ಲೂಟಿ ಮಾಡಿದ ಹಣ ಸುಮಾರು 73 ಲಕ್ಷ ಕೋಟಿಗಳಷ್ಟು ಎಂದು ಅಂದಾಜಿಸಲಾಗಿದೆ. ದಿನಕ್ಕೊಂದು ಭ್ರಷ್ಟಾಚಾರದ ಪ್ರಕರಣಗಳನ್ನು ಕೊಟ್ಟಿರುವುದೇ ಯು.ಪಿ.ಎ ಸರಕಾರದ ಅತಿದೊಡ್ಡ ಸಾಧನೆಯಾಗಿದೆ. ಮಹಾತ್ಮಗಾಂಧೀಜಿ, ಸರ್ದಾರ್ ವಲ್ಲಭಭಾಯಿ ಪಟೇಲ್, ಲಾಲ್‌ಬಹದ್ದೂರ್ ಶಾಸ್ತ್ರಿಯಂತಹ ಪಾರದರ್ಶಕತೆ ಮತ್ತು ಪ್ರಾಮಾಣಿಕತೆಗೆ ಇನ್ನೊಂದು ಹೆಸರಾದ ಮಹಾಪುರುಷರು ಕಟ್ಟಿ ಬೆಳೆಸಿದ ರಾಷ್ಟ್ರೀಯ ಪಕ್ಷ ಕಾಂಗ್ರೆಸ್ ಇಂದು ಸೋನಿಯಾಜಿ, ರಾಹುಲ್‌ಗಾಂಧಿ, ಮನಮೋಹನ್‌ಸಿಂಗ್ ನೇತೃತ್ವದಲ್ಲಿ ನಡೆದಿರುವ ಕೃತ್ಯಗಳಿಂದ ಭಾರತವು ಅಂತರಾಷ್ಟ್ರೀಯ ಮಟ್ಟದಲ್ಲಿ ತಲೆ ತಗ್ಗಿಸುವಂತೆ ಮಾಡಿದ್ದಾರೆ. ಈ ರೀತಿ ಭ್ರಷ್ಟಾಚಾರಕ್ಕೆ ಎಡೆ ಮಾಡಿಕೊಟ್ಟಿರುವ ಪಕ್ಷಗಳೆಲ್ಲವೂ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ. ಇಂತಹ ರಾಜಕೀಯ ಪಕ್ಷಗಳು, ರಾಜಕೀಯ ನಾಯಕರುಗಳು ನಮ್ಮ ದೇಶಕ್ಕೆ ಅಗತ್ಯವಿದೆಯೇ ಎಂಬುದನ್ನು ನಾವೆಲ್ಲರೂ ಯೋಚಿಸಬೇಕಾಗಿದೆ.

● ಭ್ರಷ್ಟಾಚಾರದಿಂದ ದೇಶದ ಲಕ್ಷ ಲಕ್ಷ ಕೋಟಿಗಳ ಹಗಲು ಲೂಟಿ

⇨ ನಮ್ಮ ದೇಶದಲ್ಲಿ ಬೃಹತ್ ಪ್ರಮಾಣದಲ್ಲಿ ಕೊನೆಯಿಲ್ಲದೆ ನಡೆಯುತ್ತಿರುವ ಇರುವ ದೇಶದ ಭ್ರಷ್ಟಾಚಾರವನ್ನು ಸಾರ್ವಜನಿಕರು ಅದರಲ್ಲೂ ವಿಶೇಷವಾಗಿ ವಿದ್ಯಾರ್ಥಿ ಯುವಜನತೆಯ ಮುಂದಿಡುವುದು ವಿದ್ಯಾರ್ಥಿ ಸಂಘಟನೆಯಾದ ಎ.ಬಿ.ವಿ.ಪಿಯ ಆದ್ಯ ಕರ್ತವ್ಯವಾಗಿದೆ. ಅ.ಭಾ.ವಿ.ಪ ಈ ಭ್ರಷ್ಟಾಚಾರದ ವಿರುದ್ಧ ಅಭಿಯಾನದ ಮೂಲಕ ಭ್ರಷ್ಟಾಚಾರದ ಆಳ, ವ್ಯಾಪ್ತಿಯನ್ನು ಮೀರಿ ನಡೆದಿರುವ ಹಗರಣಗಳನ್ನು ಸಮಾಜದ ಮುಂದೆ ಬಿಚ್ಚಿಡುವ ಪ್ರಯತ್ನವನ್ನು ಮಾಡುತ್ತಿದೆ. ಭ್ರಷ್ಟಾಚಾರಗಳಿಂದ ಭಾರತದ ಗೌರವಕ್ಕೆ ಅಂತರಾಷ್ಟ್ರೀಯ ಮಟ್ಟದಲ್ಲಿ ಧಕ್ಕೆ ಬಂದೊದಗಿರುವುದು ನಾಚಿಕೆಗೇಡಿನ ವಿಚಾರವೆಂದು ಅಭಾವಿಪ ಭಾವಿಸುತ್ತದೆ. ಆತ್ಮೀಯರೇ, ಬನ್ನಿ ಕೈಜೋಡಿಸಿ ಭಾರತದ ಗೌರವವನ್ನು ಎತ್ತಿ ಹಿಡಿಯೋಣ.

⇨ ಕಾಂಗ್ರೆಸ್ ನೇತೃತ್ವದ ಯು.ಪಿ.ಎ ಸರ್ಕಾರ ದೇಶದಲ್ಲಿ ನಡೆಸುತ್ತಿರುವುದು ಬರೀ ಭ್ರಷ್ಟಾಚಾರವಲ್ಲ ಇದು ಹಗಲು ದರೋಡೆಯಾಗಿದೆ. ಕಾಂಗ್ರೆಸ್ ತನ್ನ ಆಡಳಿತ ಮತ್ತು ಅಧಿಕಾರದ ಪ್ರಭಾವವನ್ನು ಬಳಸಿಕೊಂಡು ಕಾನೂನನ್ನು ಗಾಳಿಗೆ ತೂರಿ ಸಾಮಾಜಿಕ ನ್ಯಾಯ, ಸಮಾನತೆ ಮತ್ತಿತರ ಮೌಲ್ಯಗಳನ್ನು ಹೇಗೆ ತುಳಿದು ಹಾಕಿದೆ ಎಂಬುದನ್ನು ಈ ಕೆಳಗಿನ ವಿಷಯಗಳು ಸಾರಿ ಸಾರಿ ಹೇಳುತ್ತಿವೆ.

● 2ಜಿ ಸ್ಪೆಕ್ಟ್ರಂ ಹಗರಣ – 1 ಲಕ್ಷದ 76 ಸಾವಿರ ಕೋಟಿಗಳ ಲೂಟಿ

⇨ 2ಜಿ ಸ್ಪೆಕ್ಟ್ರಂ ಹಗರಣವು ಪ್ರಜಾಪ್ರಭುತ್ವದ ರಕ್ಷಕರು, ಸರ್ಕಾರಿ ಅಧಿಕಾರಿಗಳು, ರಾಜಕೀಯ ವರ್ಗದವರು ಮತ್ತು ಮಾಧ್ಯಮದವರು ಸೇರಿದಂತೆ ನಮ್ಮ ದೇಶದ ಪ್ರಜಾಪ್ರಭುತ್ವ, ಸಂವಿಧಾನ, ಭಾರತದ ಸಂಸ್ಕೃತಿ, ಪ್ರಾಮಾಣಿಕತೆ ಮತ್ತು ಪಾರದರ್ಶಕತೆಗಳ ವಿರುದ್ಧ ನಡೆಸಿರುವ ಅತ್ಯಂತ ಕ್ರೂರ ನಿಕೃಷ್ಟ ವ್ಯಂಗ್ಯ ನರ್ತನವಾಗಿದೆ.

→ 122 ಟೆಲಿಕಾಂ ಲೈಸೆನ್ಸ್‌ಗಳನ್ನು ಜನವರಿ 2008 ರಂದು 2001 ರಲ್ಲಿದ್ದ ದರದಲ್ಲೇ ಮಾರಾಟ ಮಾಡಲಾಗಿದೆ.
ಟೆಂಡರ್‌ಗಳನ್ನು (ಬಿಡ್) ಕರೆಯದೆ ತಮಗೆ ಬೇಕಾದ ಕಂಪೆನಿಗಳಿಗೆ ಟೆಲಿಕಾಂ ಲೈಸೆನ್ಸ್‌ಗಳನ್ನು ಕೊಡಲಾಗಿದೆ.

→ ಭಾರತದ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ (TRAI - ಟೆಲಿಕಾಂ ರೆಗ್ಯುಲೇಟರಿ ಅಥಾರಿಟಿ ಆಫ್ ಇಂಡಿಯಾ)ನ 'ಈಗಿನ ಮಾರುಕಟ್ಟೆ ದರದಲ್ಲಿ ಪರವಾನಗಿ ನೀಡುವಂತೆ ಕೊಟ್ಟ ಸಲಹೆಯನ್ನು ಕೇಂದ್ರ ಸಚಿವ ಎ.ರಾಜಾರವರು ಗಾಳಿಗೆ ತೂರಿ ತನಗೆ ಬೇಕಾದವರಿಗೆ ಲೈಸೆನ್ಸ್ ಕೊಟ್ಟಿದ್ದಾರೆ'. ಆ ತಪ್ಪಿಗಾಗಿ ಈಗ ಅವರನ್ನು ಬಂಧಿಸಲಾಗಿದೆ.

→ ಲೈಸೆನ್ಸ್‌ಗಳನ್ನು ಬಹುತೇಕ, ಸ್ವಾನ್ ಟೆಲಿಕಾಂ, ಯೂನಿಟೆಕ್ ಮುಂತಾದ ದೂರಸಂಚಾರ ಕ್ಷೇತ್ರದ ಅನುಭವವಿಲ್ಲದ ಡೋಂಗಿ ಕಂಪೆನಿಗಳಿಗೆ ಕೊಡಲಾಗಿದೆ. ಮಾತ್ರವಲ್ಲದೆ ರಿಲಿಯನ್ಸ್, ಟಾಟಾ ಇಂಡಿಕಾಮ್, ವೋಡಾಫೋನ್, ಯುನಿನಾರ್, MTS ಮುಂತಾದ ಕಂಪೆನಿಗಳು ಅವರದೇ ಆದ ಹೆಸರಿನಲ್ಲಿ ಲೈಸೆನ್ಸ್ ಪಡೆಯದೆ, ಅವ್ಯವಹಾರದ ಮೂಲಕ ಡೋಂಗಿ ಕಂಪೆನಿಗಳ ಹೆಸರಿನಲ್ಲಿ ಲೈಸೆನ್ಸ್ ಪಡೆದಿದ್ದಾರೆ.

→ 122 ಟೆಲಿಕಾಂ ಲೈಸೆನ್ಸ್‌ಗಳಲ್ಲಿ 85 ಟೆಲಿಕಾಂ ಲೈಸೆನ್ಸ್‌ಗಳನ್ನು ಡೋಂಗಿ ಮತ್ತು ಅನರ್ಹ ಕಂಪನಿಗಳಿಗೆ ನೀಡಲಾಗಿದೆ.

→ ತಮಗೆ ಬೇಕಾದ ಕಂಪನಿಗಳಿಗೆ ಟೆಲಿಕಾಂ ಲೈಸೆನ್ಸ್‌ಗಳನ್ನು ಕೊಡುವ ಉದ್ದೇಶದಿಂದಲೇ ಭಾರತದ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ (TRAI - ಟೆಲಿಕಾಂ ರೆಗ್ಯುಲೇಟರಿ ಅಥಾರಿಟಿ ಆಫ್ ಇಂಡಿಯಾ) ನಿಯಮಾವಳಿಗಳನ್ನು ಗಾಳಿಗೆ ತೂರಿ ತಮ್ಮವರಿಗೆ ಬೇಕಾದಂತೆ ಅತ್ಯಂತ ಕಡಿಮೆ ಹಣದಲ್ಲಿ ಲೈಸೆನ್ಸ್‌ಗಳನ್ನು ನೀಡಲಾಗಿದೆ.

⇨ ಇಂತಹ ಬೃಹತ್ 2ಜಿ ಹಗರಣವು ಸೋನಿಯಾಜಿ, ಮನಮೋಹನ್‌ಜಿ ಹಾಗೂ ರಾಹುಲ್‌ಜಿ ಯವರಿಗೆ 2 ವರ್ಷಗಳ ಹಿಂದೆಯೆ ಮಾಹಿತಿಯಿತ್ತು. ಆದರೂ ಕೂಡ ಏನು ಕ್ರಮಗಳನ್ನು ಕೈಗೊಳ್ಳದೆ ಭ್ರಷ್ಟಾಚಾರಕ್ಕೆ ದಾರಿ ಮಾಡಿಕೊಟ್ಟರುವುದ ಅಕ್ಷಮ್ಯ ಅಪರಾಧವಾಗಿದೆ.

→ ಕೇಂದ್ರದ ಮಾಜಿ ಸಚಿವ ಎ.ರಾಜಾರವರ ಬಂಧನದಿಂದ ಕೇಂದ್ರ ಸರಕಾರದ ಸಂಪೂರ್ಣ ಕೈವಾಡ 2–ಜಿ ಸ್ಪೆಕ್ಟ್ರಂ ಹಗರಣದಲ್ಲಿ ಇದೆ ಎಂಬುವುದು ಮತ್ತೊಮ್ಮೆ ಸಾಬೀತಾಗಿದೆ. ಕೇವಲ ರಾಜಾರವರ ಬಂಧನ ಮಾತ್ರದಿಂದ ಪ್ರಕರಣವನ್ನು ಸಂಪೂರ್ಣ ಮುಚ್ಚಿ ಹಾಕಲು ಸಾಧ್ಯವಿಲ್ಲ. ರಾಜಾರವರು ದೇಶಕಂಡ ಐತಿಹಾಸಿಕ ಸುಪರ್ ಹಿಟ್ 2–ಜಿ ಸ್ಪೆಕ್ಟ್ರಂ ಸಿನಿಮಾದ (ಹಗರಣ) ನಾಯಕ ಮಾತ್ರ. ಆದರೆ ಈ ಸಿನಿಮಾದ ನಿರ್ದೇಶಕರು, ನಿರ್ಮಾಪಕರು ಮತ್ತಿತರ ತಂತ್ರಜ್ಞರು ಯಾರು!! ಮಹಾತ್ಮ ಗಾಂಧಿಯ ಪರಂಪರೆ ಹೇಳಿಕೊಳ್ಳುತ್ತ, ದೇಶ ಮಾರಲು ಹೊರಟಿರುವ ಸೋನಿಯಾಗಾಂಧಿ ನೇತೃತ್ವದ ಭ್ರಷ್ಟ ಕಾಂಗ್ರೆಸ್ ಪಕ್ಷವೇ ದೇಶಕ್ಕೆ ಉತ್ತರ ಕೊಡಬೇಕು.

● ಆದರ್ಶ ಅಪಾರ್ಟಮೆಂಟ್ ಹಗರಣ ಹಗರಣಗಳಿಗೆ ಆದರ್ಶವೇ.....?

⇨ ಮಹಾರಾಷ್ಟ್ರದಲ್ಲಿ ಕಾಂಗ್ರೆಸ್ ಸರಕಾರ, ರಾಜಕೀಯ ಪ ವ್ಯಕ್ತಿಗಳು ಮತ್ತು ಅಧಿಕಾರಿಗಳು ಜೊತೆ ಸೇರಿ ಹೀಗೂ ದೇಶಕ್ಕೆ ದ್ರೋಹ ಮಾಡಬಹುದು ಎಂಬುದಕ್ಕೆ ಒಂದು ಕಾಣ್ಣಾ ಉದಾಹರಣೆಯನ್ನು ನೀಡಿದೆ.

→ 31 ಮಹಡಿಗಳ ಒಂದು ಬೃಹತ್ ಕಟ್ಟಡವನ್ನು, ಕಾನೂನುಬಾಹಿರವಾಗಿ ಸರ್ಕಾರದ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ, ಮುಂಬೈನ ಕರಾವಳಿ ಭಾಗದ, ಕೋಲಾಬಾದ್‌ನ ನೌಕಾದಳಕ